**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 557 / 2018**

ಡಿ.ಡಬ್ಲೂ-01

| | |
|---|---|
| ಹೆಸರು | **ವಾಜಿದುಲ್ಲಾ ಖಾನ್** |
| ತಂದೆ ಹೆಸರು | **ಯುಸೂಫ್ ಖಾನ್** |
| ವಯಸ್ಸು | **62** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಕಾಡುಗೋಡಿ, ಬೆಂಗಳೂರು** |

**ದಿನಾಂಕಃ 24-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಶ್ರೀ. ಎನ್.ಕೆ. ಆರೋಪಿ ಪರ ವಕೀಲರಿಂದ ಃ-

ದಿಃ 25-10-2017 ರಂದು ಮಾಗಡಿ ಕೋರ್ಟಿನಲ್ಲಿ ಸಿಸಿ ನಂಬರ್-260/2016 ಎಂದು ಕೇಸು ಇತ್ತು ಆ ಉದ್ದೇಶದಿಂದ ನಾನು ನ್ಯಾಯಾಲಯಕ್ಕೆ ಬಂದಿದ್ದೇನು. ಸದರಿ ಪ್ರಕರಣದಲ್ಲಿ 10 ಜನ ಆರೋಪಿಗಳು ಇದ್ದರು. ಸದರಿ ಆರೋಪಿಗಳು ನಾನು ಪ್ರಕರಣಕ್ಕೆ ಹಾಜರಾಗುವಾಗ ನನಗೆ ಹಿಂಸೆಯನ್ನು ಕೊಡುತ್ತಿದ್ದರು. ಸದರಿ ದಿನದಂದು ನನಗೆ ಆರೋಪಿಗಳು ಗಲಾಟೆ ಮಾಡಿ ಎಳೆದಾಡಿ ಹಲ್ಲೆ ಮಾಡಲು ಬಂದಿದ್ದರು. ನಾನು ನ್ಯಾಯಾಲಯದ ಹೊರಗಡೆ ಬಂದಾಗ ವಹಿದಾ ಬಾನು ಎಂಬುವರು ಆರೋಪಿಗಳೊಂದಿಗೆ ಸೇರಿಕೊಂಡು ನನಗೆ ಹಲ್ಲೆ ಮಾಡಿರುತ್ತಾರೆ. ಸದರಿ ವಹಿದಾ ಬಾನು ರವರು ಏಕಾಏಕಿ ಕಿರುಚಿಕೊಂಡು ಉಗುರಿನಿಂದ ಪರಿಚಿಕೊಂಡಿರುತ್ತಾರೆ ನಾನು ಸದರಿ ವಹಿದಾ ಬಾನು ರವರಿಗೆ ಹಲ್ಲೆ ಮಾಡಿರುವುದಿಲ್ಲ. ನಂತರ ಸದರಿ ವಹಿದಾ ಬಾನು ರವರು ನ್ಯಾಯಾಧೀಶರ ಮುಂದೆ ಬಂದು ನಾನು ಹಲ್ಲೆ ಮಾಡಿರುತ್ತೇನೆಂದು ಹೇಳಿರುತ್ತಾರೆ. ಸದರಿ ದಿನದಂದು ನಾನು ಒಂದು ದೂರನ್ನು ಕೂಡ ನ್ಯಾಯಾಧೀಶರಿಗೆ ಕೊಟ್ಟಿರುತ್ತೇನೆ. ಆರೋಪಿಗಳು ನನ್ನ ಮನೆಯ ಸಾಮಾನುಗಳನ್ನು ಆಚೆ ತೆಗೆದು ಕಳ್ಳತನ ಮಾಡಿರುತ್ತಾರೆ. ಸದರಿ ಸಿಸಿ ನಂಬರ್-260/2016 ಪ್ರಕರಣವನ್ನು ವಾಪಸ್ಸು ಪಡೆಯಲು ಆರೋಪಿಗಳು ಸದರಿ ವಹಿದಾ ಬಾನು ಮುಖಾಂತರ ಪ್ರಯತ್ನ ಪಟ್ಟಿರುತ್ತಾರೆ. ನಾನು ಸದರಿ ಕೇಸನ್ನು ವಾಪಸ್ಸು ಪಡೆದಿರುವುದಿಲ್ಲ ಎಂದು ನನ್ನ ವಿರುದ್ದ ಈ ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ಸದರಿ ನನ್ನಮನೆಯಿಂದ ವಸ್ತುಗಳನ್ನು ಕಳ್ಳತನ ಮಾಡಿದ್ದರಿಂದ ನಾನು ವಕೀಲರ ಮೂಲಕ ನೋಟಿಸನ್ನು ಸಹ ಕೊಟ್ಟಿದ್ದೇನು. ಸದರಿ ಅಂಚೆ ಮೂಲಕ ನೀಡಿರುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ಮತ್ತು ನನ್ನ ಮಗ ಯಾವುದೇ ಹಲ್ಲೆ ಮಾಡಿರುವುದಿಲ್ಲ ನಾವು ಕೇಸಿಗಾಗಿ ಬಂದಿದ್ದೇವು. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನನ್ನ ಪರವಾಗಿ ಗುರುತಿಸಲು ಕೇಳಿಕೊಳ್ಳುತ್ತೇನೆ. ಸಿಸಿ ನಂಬರ್-260/2016 ರ ದೃಢೀಕೃತ ಪ್ರತಿಯಾದ ಆದೇಶ ಪುಟಗಳನ್ನು ಹಾಜರು ಪಡಿಸಿದ್ದು ನಿಡಿ-1 ಎಂದು ಗುರುತಿಸಲಾಯಿತು. ಖಾಸಗಿ ಪ್ರಕರಣ ಸಂಖ್ಯೆ 01/2015 ರ ದೃಢೀಕೃತ ನಕಲಿನ ಪಿರ್ಯಾದಿಯನ್ನು ಹಾಜರು ಪಡಿಸಿದ್ದು ನಿಡಿ-2 ಎಂದು

ಗುರುತಿಸಲಾಯಿತು. ದೃಢೀಕೃತ ನಕಲಿನ ದೋಷರೋಪಣ ಪಟ್ಟಿ ಹಾಗೂ ಸಾಕ್ಷಿಗಳ ಹೇಳಿಕೆಯನ್ನು ಹಾಜರು ಪಡಿಸಿದ್ದು ನಿಡಿ-3 ಎಂದು ಗುರುತಿಸಲಾಯಿತು. ಸಿಸಿ ನಂಬರ್-260/2016 ರ ದೃಢೀಕೃತ ಪ್ರತಿಯಾದ ಚಾಸಾ-4 / ಪ್ರಾಸಾ-1, ಚಾಸಾ-1 / ಪ್ರಾಸಾ-2, ಚಾಸಾ-3 / ಪ್ರಾಸಾ-3, ಚಾಸಾ-6 / ಪ್ರಾಸಾ-4, ಚಾಸಾ-7 / ಪ್ರಾಸಾ-6, ಚಾಸಾ-5 / ಪ್ರಾಸಾ-7, ಚಾಸಾ-8 / ಪ್ರಾಸಾ-5, ಚಾಸಾ-9 / ಪ್ರಾಸಾ-8 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲನ್ನು ಹಾಜರು ಪಡಿಸಿದ್ದು ಒಟ್ಟಾಗಿ ನಿಡಿ-4 ಎಂದು ಗುರುತಿಸಲಾಯಿತು. ಸಾಕ್ಷಿ ಹೇಳಿಕೆ ಹಾಜರು ಪಡಿಸಿದ್ದು ನಿಡಿ-5 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಕೃತ್ಯ ಸ್ಥಳದ ಪಂಚನಾಮೆಯನ್ನು ಹಾಜರು ಪಡಿಸಿದ್ದು ನಿಡಿ-6 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಗಾಯದ ಪ್ರಮಾಣಪತ್ರವನ್ನು ಹಾಜರು ಪಡಿಸಿದ್ದು ನಿಡಿ-7 ಎಂದು ಗುರುತಿಸಲಾಯಿತು. ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿದ್ದು ನಿಡಿ-8 ಎಂದು ಗುರುತಿಸಲಾಯಿತು. ಪೋಲಿಸ್ ಅಧೀಕ್ಷಕರು, ರಾಮನಗರ ಇವರಿಗೆ ನೀಡಿದ ದೂರಿನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ನಿಡಿ-9 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಪ್ರಥಮ ವರ್ತಮಾನ ವರದಿಯನ್ನು ಹಾಜರು ಪಡಿಸಿದ್ದು ನಿಡಿ-10 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಗಾಯದ ಪ್ರಮಾಣಪತ್ರವನ್ನು ಹಾಜರು ಪಡಿಸಿದ್ದು ನಿಡಿ-11 ಎಂದು ಗುರುತಿಸಲಾಯಿತು. ದಿಃ 07-12-2016 ರಂದು ವಹಿದಾ ಬಾನು ರವರಿಗೆ ನೀಡಿದ ಕಾನೂನು ತಿಳುವಳಿಕೆಯ ಪ್ರತಿಯನ್ನು ಹಾಜರು ಪಡಿಸಿದ್ದು ನಿಡಿ-12 ಎಂದು ಗುರುತಿಸಲಾಯಿತು. ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ನಿಡಿ-13 ಎಂದು ಗುರುತಿಸಲಾಯಿತು. ಖಾಸಗಿ ಪ್ರಕರಣ ಸಂಖ್ಯೆ 01/2015 ರ ದೃಢೀಕೃತ ನಕಲಿನ ಆದೇಶ ಪುಟವನ್ನು ಹಾಜರು ಪಡಿಸಿದ್ದು ನಿಡಿ-14 ಎಂದು ಗುರುತಿಸಲಾಯಿತು. ಖಾಸಗಿ ಪ್ರಕರಣ ಸಂಖ್ಯೆ 01/2015 ರ ದೃಢೀಕೃತ ನಕಲಿನ ಪಿರ್ಯಾದಿಯನ್ನು ಹಾಜರು ಪಡಿಸಿದ್ದು ನಿಡಿ-15 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್.ಸಿ.
ಮಾಗಡಿ.